ನಡೆಯಲೋ, ಮೂತ್ರದ ಅವಸರ ತಡೆಯಲೋ ಹೋಗಿ ಅಡ್ಡಲಾಗಿದ್ದ ಒಂದು ಸಣ್ಣ ಕಟ್ಟೆಗೆ ಹೊಡೆದುಕೊಂಡು ಅಲ್ಲೇ ಬಿದ್ದ. ಪಕ್ಕದಲ್ಲೆ ಬೆಂಗಳೂರಿನ ಜನಸಾಗರ. ಕಾಲು ತುಳಿತಕ್ಕೆ ಸಿಕ್ಕರೂ ಅಚ್ಚರಿಯಿಲ್ಲ!

ನಾನು ಗಾಬರಿಯಾಗಿ ಮಗಳನ್ನು ಇಳಿಸಿ ಅವನನ್ನು ಬಿದ್ದ ಸ್ಥಳದಿಂದ ಎತ್ತಿ ಸಮಾಧಾನಿಸತೊಡಗಿದೆ. ತರಚು ಗಾಯವಾಗಿತ್ತು. ಜೊತೆಗೆ ಬಿದ್ದಾಗ ಅವನು ಮೂತ್ರ ತಡೆಯಲಾಗದೇ ಮಾಡಿಕೊಂಡಿದ್ದೂ ಆಗಿತ್ತು. ಬಿದ್ದ ನೋವೂ, ಚಡ್ಡಿಯಲ್ಲೇ ಮಾಡಿಕೊಂಡಿದ್ದೂ ಸೇರಿ ಅವನಿಗೆ ಜಾಗತಿಕ ಮಟ್ಟದಲ್ಲಿ ಅವಮಾನವಾದಂತೆನಿಸಿ ಅಳುವುದರ ಜೊತೆಗೆ ನನ್ನ ಹೊಡೆಯತೊಡಗಿದ; ತನ್ನ ಕೈ ಹಿಡಿಯಲಿಲ್ಲ ಅಂತ.

ಅಷ್ಟರಲ್ಲಿ ಕಂಡಕ್ಟರ್ ಜೋರು ನಡಿಗೆಯಲ್ಲಿ ಬರ್ತಾ, 'ಏನಮ್ಮಾ ನೀವು. ಸರಿಯಾದ ಟೈಮಿಗೆ ಬರೋಕಾಗಿಲ್ಲ ಅಂದ್ರೆ ಯಾಕಾದರೂ ಬರ್ತಿರೋ. ಕಾಯೋಕೇನು ನಿಮ್ಮ ಸ್ವಂತ ವೆಹಿಕಲ್ಲಾ?' ಅಂದ. ಮಗ ಬಿದ್ದದ್ದು ವಿವರಿಸ ಹೋದರೆ ಕಿವಿಯಿಲ್ಲದವನಂತೆ, 'ಬೇಗ ಹೋಗಿ, ಆಮೇಲೆ ಮಾತನಾಡುವಿರಂತೆ' ಅನ್ನುತ್ತಾ ನಡೆದ. ಅಲ್ಲಿಗೆ ನನ್ನ ಬೆಂಗಳೂರಿನಲ್ಲಿ ಒನ್ನಿಗೆ ಹೋಗಬೇಕೆನ್ನುವ ವಿಚಾರ ಮೋಕ್ಷ ಕಂಡಿತು. ಓಡುತ್ತಾ ಬಸ್ಸಿಗೆ ವಾಪಾಸು ಬಂದು ಮಗನ ಒದ್ದೆ ಚಡ್ಡಿ ಬದಲಿಸಿ, ಮಗಳ ಪ್ಯಾಡು ಬಿಚ್ಚಿ, ಅವರ ಹಸಿವಿಗೆ ಡಬ್ಬಿಯ ಮೊಸರನ್ನ ಬಿಸ್ಕೇಟು ಕೊಟ್ಟು ಡಬ್ಬಿಮುಚ್ಚಿಟ್ಟು ಸೀಟಿಗೊರಗಿದೆ.

ಯಾಕೋ ಕಣ್ಣು ಮಂಜುಮಂಜಾಯಿತು. ಇದೆಲ್ಲಾ ಬೇಕಾ? ಅಣ್ಣನ ಮನೆಗೆ ಇಷ್ಟು ಕಷ್ಟಬಿದ್ದು ಹೋಗುವ ಅವಶ್ಯಕತೆ ನಿಜವಾಗಿಯೂ ಇದೆಯಾ? ಮಕ್ಕಳು ಪ್ರಯಾಣದ ಆಯಾಸಕ್ಕೋ, ಅಮ್ಮನನ್ನು ಕಂಡಕ್ಟರ್ ಬೈದಿದ್ದಕ್ಕೋ ಮಂಕಾಗಿ ಕುಳಿತಿದ್ದವು. ಪಾಪ... ಮಕ್ಕಳಿಗಾದರೂ ಏನು ತಿಳಿದೀತು. ದೊಡ್ಡವನಿಗೆ ತುಸು ತಿಳಿದರೂ ಮೂತ್ರದ ಅವಸರಕ್ಕೆ ಬೇರೇನೂ ಮಾಡುತ್ತೆ ಪಾಪ ಅನಿಸಿ ಎರಡೂ ಮಕ್ಕಳನ್ನ ತಬ್ಬಿಕೊಂಡೆ. ಎರಡಕ್ಕೂ ಸಮಾಧಾನ ಎನಿಸಿತು. ಮಗಳು ಯಾವಾಗಲೂ ಪೂಸಿ ಹೊಡೆಯೋದ್ರಲ್ಲಿ ಎತ್ತಿದಕೈ.

ತಬ್ಬಿಕೊಂಡ ತಕ್ಷಣ ನನ್ನ ಕೆನ್ನೆಗೊಂದು ಮುತ್ತು ಕೊಟ್ಟು, ಆ ಕಂಡಕ್ಟರಿಗೆ ಹೇಗೆಲ್ಲಾ ದೇವರು ಶಿಕ್ಷೆ ಕೊಡ್ತಾನೆ ಅಂತ ಮಾತು ಪೋಣಿಸತೊಡಗಿದಳು. ನಗು ಬಂತು. ನಾನೊಂದು ಮುತ್ತು ಕೊಟ್ಟು, 'ಮಲಗು ಚಿನ್ನಾರಿ' ಅಂದೆ. ಹೇಳಿದ್ದೆ ತಡ, ನನ್ನ ತೊಡೆಯನ್ನ ಹಾಸಿಗೆಯಂತೆ ಸರಿಪಡಿಸಿ ತಲೆಯಿಟ್ಟಳು. ಅಲ್ಲೀವರೆಗೂ ತುಸು ಅದೃಶ್ಯವಾಗಿದ್ದ ನನ್ನ ಅವಸರ ಒಂದೇ ಬಾರಿಗೆ ಬೆಳಕಿನ ವೇಗದಲ್ಲಿ ಶುರುವಾಗತೊಡಗಿತು.

ಬಹುಶಃ ಐದು ತಾಸಿಗೂ ಮೀರಿ ತಡೆದದ್ದಕ್ಕೋ ಏನೋ ವಿಪರೀತ ತಲೆ ನೋಯಲು ಶುರುವಿಟ್ಟಿತು. ತಲೆನೋವು ಗಿಲೆನೋವು ಯಾವುದೂ ಬಾರದ ನನಗೆ ತಲೆನೋವನ್ನು ಸಹಿಸೋದಾ, ಮೂತ್ರ ತಡೆಯೋದಾ, ತಳಹೊಟ್ಟೆಯಲ್ಲಿ ಅಗ್ನಿರೋ ಚುಚ್ಚುವ ಅನುಭವವನ್ನು ಸಹಿಸೋದಾ ತಿಳಿಯದೆ ಮುಖ ಕಿವುಚುವ ಹಾಗಾಯಿತು. ಹೇಗಾದರೂ ಸರಿಯೇ, ಮೂತ್ರ ತಡೆಯಲೇಬೇಕು ಅಂತ ನಿರ್ಧರಿಸಿ ಸೂರ್ಯ ಮುದ್ರೆ ಮಾಡಿದರೆ ತುಸು ಅವಸರ ಕಡಿಮೆಯಾಗಬಹುದೆಂದೆನಿಸಿ ಬೆರಳುಗಳ ಜೋಡಿಸಿದೆ.

ನೂರು, ತೊಂಬತ್ತೊಂಬತ್ತು, ತೊಂಬತ್ತೆಂಟು... ದೇವರೇ ಏನು ಮಾಡಿದರೂ ತಡೆಯಲಾಗ್ತಿಲ್ಲ. ಬಸ್ಸು ವೇಗವಾಗಿ ಹೋಗುತ್ತಿತ್ತು. ನನ್ನ ಮೂತ್ರದ ಅವಸರ ಅದಕ್ಕೂ ಮೀರಿ ಹೆಚ್ಚಾಗ್ತಾ ಹೋಯಿತು. ಆಗಲೇ... ಯಾವಾಗಲೋ ತೊಡೆ ಸರಿಹೋಗದೆ ಎದ್ದುಕುಳಿತಿದ್ದ ಮಗಳು ತೂಕಡಿಕೆಗೆ ದೊಪ್ಪಂತ ಮತ್ತೆ ತೊಡೆಗೆ ಉರುಳಿದಳು. ಈ ಉರುಳುವ ಕ್ರಿಯೆಯಲ್ಲಿ ಅವಳ ತಲೆ ನನ್ನ ತಳಹೊಟ್ಟೆಗೆ ತಾಗಿ ಸತ್ತೇ ಹೋದಷ್ಟು ನೋವೂ, ಇನ್ನೇನೂ ಆಗೇ ಹೋಯ್ತು ಎನ್ನುವ ಭಾವವೂ ಆಗಿ ಮಲಗಿದ ಮಗಳ ಮೇಲೆ ವಿಪರೀತ ಸಿಟ್ಟು ಬಂದು ಅವಳನ್ನು ನೆಟ್ಟಗೆ ಕೂರಿಸಿ ಬೆನ್ನಿನ ಮೇಲೆರಡು ಜೋರು ತದುಕಿದೆ.

ಇಷ್ಟು ಹೊತ್ತೂ ಮುದ್ದುಮಾಡಿದ ಅಮ್ಮ ಏಕಾಏಕಿ ಹೀಗೆ ಹೊಡೆದದ್ದು ಯಾಕೆಂದು ತಿಳಿಯದೆ ಮಗಳು ಹೋ ಅಂತ ದೊಡ್ಡ ಬಾಯಿ ತೆಗೆದು ಅಳಲಾರಂಬಿಸಿದಳು. ಗಾಬರಿಯಾದ ನಾನು ಅವಳನ್ನು ಸಮಾಧಾನಿಸಲೆತ್ನಿಸುತ್ತಿದ್ದಾಗ ಪಕ್ಕದಲಿದ್ದ ಮಗ ಕಣ್ಣು ತುಂಬಾ ನೀರು ತುಂಬಿಕೊಂಡು, 'ನೀನು ಡೆವಿಲ್' ಅಂದ. ಅವನ ಪುಟ್ಟ ತಂಗ್ಯಮ್ಮನಿಗೆ ಸುಮ್ಮನೇ ಹೊಡೆದ ಅಮ್ಮ ಅವನಿಗೆ ಇನ್ನು ಹೇಗೆ ತಾನೇ ಕಾಣಲು ಸಾಧ್ಯ?

ಸೋತು ಹೋದ ಅನುಭವವಾಯ್ತು. ಇಬ್ಬರೂ ಮಕ್ಕಳನ್ನು ಸಾರಿ ಕೇಳುತ್ತಾ, ಮಗಳನ್ನು ನಿಧಾನವಾಗಿ ನನ್ನ ಹೊಟ್ಟೆಗೆ ತುಸುವೂ ತಾಕದಂತೆ ತೊಡೆಯ ಮೇಲೆ ಮಲಗಿಸಿಕೊಂಡೆ. ಅಮ್ಮನಿಗೆ ಹೊಟ್ಟೆಯಲ್ಲಿ 'ಅಬ್ಬು' ಆಗಿರೋದ್ರಿಂದ ಹೊಟ್ಟೆಗೆ ತಾಕಬಾರದೆಂಬ ಕಾರಣ ಹೇಳಿದ್ದು ಅವಳ ಕುತೂಹಲಕ್ಕೆ ಕಾರಣವಾಗಿ ಕಣ್ಣಿಂದ ನೀರು ಇಳಿಸುತ್ತಲೇ, 'ಇಲ್ಲಿ ಅಬ್ಬು ಆಯ್ತಾ... ಇಲ್ಲಿಯಾ?' ಅಂತ ಹೊಟ್ಟೆಯ ಮೇಲೆಲ್ಲಾ ತನ್ನ ಪುಟ್ಟ ಬೆರಳಿಂದ ಒತ್ತಿಒತ್ತಿ ಕೇಳತೊಡಗಿದಳು. ಸ್ವರ್ಗ ಸುಖವೆನಿಸಬಹುದಾದ ಪುಟ್ಟ ಬೆರಳ ಅಕ್ಕರೆಯ ಸ್ಪರ್ಶ ನರಕದ ಬಾಗಿಲಂತೆ ಕಾಣತೊಡಗಿ, ಮಗಳನ್ನು ಬೈಯಲಾಗದೆ ಹಾಗೇ ಒರಗಿದೆ.

ಮಗ ಪುಟ್ಟ ದೂರ್ವಾಸ ಮುನಿಯಂತೆ ಮುನಿದು ಕುಳಿತಿದ್ದ. ನನ್ನ ತಲೆಯ ನೋವೂ ಹೆಚ್ಚಿ ಮುಖದ ಸ್ನಾಯುಗಳು ಬಿಗಿಯಲಾರಂಬಿಸಿದವು. ಇನ್ನೇನು ಒಂದು ಸಣ್ಣ ಅಲುಗಾಟಕ್ಕೂ ಮೂತ್ರ ಸುರಿದೇ ಹೋಗಿಬಿಡಬಹುದೆನ್ನುವ ಭಯಕ್ಕೆ, ಹಾಗಾಗಿ ಬಿಟ್ಟರೆ ಇನ್ನೂ ಐದುಗಂಟೆ ಇದೇ ಬಸ್ಸಿನಲ್ಲಿ ನನ್ನ ಕಥೆ ಹೇಗಿರಬಹುದೆಂದು ಊಹಿಸಿಕೊಂಡು ಗಾಬರಿಯಾಗತೊಡಗಿದೆ. ಹೇಗೆ ಯೋಚಿಸಿದರೂ, ಏನೇ ಮಾಡಿದರೂ, ಭಂಗಿ ತುಸುವೇ ಬದಲಿಸಿದರೂ ಆಗದೆನ್ನುವ ಹಂತ ತಲುಪಿ ಸಾಕ್ಷಾತ್ ನರಕದ ನಾಲ್ಕನೇ ಮೆಟ್ಟಲಿನ ಅನುಭವವಾಗತೊಡಗಿತು.

ಕಂಡಕ್ಟರ್‌ನನ್ನು ಒಮ್ಮೆ ರಿಕ್ವೆಸ್ಟ್ ಸ್ಟಾಪ್ ಕೇಳೋಣವೆನಿಸಿದರೂ ಏಳುವಾಗ ಅನಾಹುತವಾಗಬಹುದೆನಿಸಿ, ಅವನು ನಿಲ್ಲಿಸದಿದ್ದರೆ ಆಗುವ ಅವಮಾನಕ್ಕಿಂತ ಹೀಗೆ ಕೂರುವುದೇ ಲೇಸೆನ್ನಿಸಿ ಕಾಲುಗಳೆರಡನ್ನೂ ಬಿಗಿ ಹಿಡಿದು ಕೈ ಮುಷ್ಟಿ ಮಾಡಿ ಕುಳಿತೆ. ಮಗ ಆಗಾಗ ನಿದ್ರೆಯಿಂದ ಎದ್ದು ನೋಡಿ ಅಮ್ಮ ಯಾಕೆ ಹೀಗೆ ಸರ್ಕಸ್ ಮಾಡ್ತಿರಬಹುದೆಂದು ಊಹಿಸಿಕೊಂಡು ಮತ್ತೆ ಮಲಗುತಿದ್ದ. ಸುಮಾರು ಏಳುಗಂಟೆಯಾಗಿರಬಹುದು. ಹೊರಗೆಲ್ಲ ಬೆಳಕು ಕತ್ತಲುಗಳ ಮಿಶ್ರಣ. ವಾತಾವರಣ ಹಿತವಾಗಿದ್ದರೂ ಯಾವುದನ್ನೂ ಅನುಭವಿಸಲಾಗದ ಸ್ಥಿತಿ. ಅದೇ ಸಂದರ್ಭದಲ್ಲಿ ಸಾಕ್ಷಾತ್ ಅಶರೀರವಾಣಿ ಬಂದಂತೆ ಕಂಡಕ್ಟರ್ ಕೂಗಿದ.

'ಐದು ನಿಮಿಷ ಟೈಮಿದೆ ನೋಡಿ. ಬೇಗ ಬೇಗ ಮುಗಿಸಿಕೊಳ್ಳಿ' ಎಂಬ ವಾಕ್ಯ ಮುಗಿಯುವುದಕ್ಕೂ ಬಸ್ಸು ಬ್ರೇಕು ಹಾಕುತ್ತಾ ನಿಲ್ಲುವುದಕ್ಕೂ ಸರಿಹೋಯ್ತು. ದೇವರ ದಯೆ. ನಾನು ಶರೀರಕ್ಕೆ ಹಾಕಿದ ಬ್ರೇಕು ಫೇಯ್ಲ್ ಆಗಲಿಲ್ಲ. ಮಕ್ಕಳ ಕಡೆಗೆ ಒಮ್ಮೆಯೂ ನೋಡದೆ ನಿರ್ದಯಿ ತಾಯಿಯಂತೆ, ಮೈಮೇಲೆ ದೆವ್ವ ಹೊಕ್ಕವಳಂತೆ ಬಸ್ಸಿನಿಂದ ಅಕ್ಷರಶಃ ಜಿಗಿದು ಎರಡೇ ಹೆಜ್ಜೆ ಆಚೆ ದಾಟಿ ಪೈಜಾಮ ಸಡಿಲಿಸಿದೆ. ಊಫ್... ಊಫ... ಮುಗಿಸಿ ಮೂರು ನಿಮಿಷವಾದರೂ ಸುತ್ತುತ್ತಿರುವ ತಲೆಯನ್ನು ಮೇಲಕ್ಕೆತ್ತಲಾಗದೇ ಹಾಗೇ ಅದೇ ಭಂಗಿಯಲ್ಲಿ ಕುಳಿತಿದ್ದೆ. ಬಸ್ಸಿನಿಂದಿಳಿದವರು ನನ್ನೆಡೆಗೆ ಒಮ್ಮೆ ನೋಡಿ ಅವರ ದಾರಿ ಹಿಡಿಯುತಿದ್ದುದು ಕಾಣುತ್ತಿತ್ತು.

ಒಬ್ಬ ವ್ಯಕ್ತಿ 'ದೀಸ್ ಪೀಪಲ್ ವಿಲ್ ನೆವರ್ ಚೇಂಜ್' ಎಂದು ಗೊಣಗಿಕೊಳ್ಳುತ್ತಾ ನಡೆದು ಹೋದರು. ಒಬ್ಬ ಮಡಿಯ ಹೆಂಗಸು, 'ಛೀ ಛೀ' ಅನ್ನುತ್ತಾ ಬಾಯಿಗೆ ಬಟ್ಟೆ ಅಡ್ಡ ಹಿಡಿದು ದಾಟಿದರು. ಯಾರೇನೇ ಅಂದರೂ ನಾನು ಏಳುವ ಸ್ಥಿತಿಯಲ್ಲಿ ಇರಲಿಲ್ಲ. ಬದುಕಿಗೆ ನಾಗರಿಕತೆಯ ಅವಶ್ಯಕತೆಯ ಕುರಿತು ಭಾರೀ ಭಾರೀ ಭಾಷಣ ಮಾಡಿದ ನಾನು, ಬಹಳ ಚಿಕ್ಕಂದಿನಲ್ಲೇ ಸ್ವಚ್ಛತೆ ಬಗ್ಗೆ, ಸಾರ್ವಜನಿಕ ವರ್ತನೆಗಳ ಸರಿ ತಪ್ಪುಗಳ ಬಗ್ಗೆ ಪ್ರಬಂಧ ಬರೆದು ಬಹುಮಾನ ಪಡೆದ ನಾನು, ನಾಗರಿಕತೆಯ ತುದಿಯಲಿದ್ದೇನೆ ಎಂದುಕೊಂಡ ನಾನು ಮೂತ್ರ ಮಾಡುವಂತಹ ಒಂದು ಸಹಜ ಕ್ರಿಯೆ ಕಲಿಸಿದ, ಕೇಳಿಸಿದ ಮಾತುಗಳು ಇಂದಿಗೂ, ಬಹುಶಃ ಎಂದಿಗೂ ನೆನಪಿನಲ್ಲುಳಿದು ಹೆಸರಿರದ ವಿಷಾದದಂಥ ಭಾವವನ್ನು ಸೃಷ್ಟಿಸುತ್ತದೆ.

ಇದೆಷ್ಟೇ ಆಳವಾದ ಅನುಭವವಾದರೂ ಕೊಳಕು ರೆಸ್ಟ್ ರೂಮ್‌ಗಳನ್ನು ತಿರಸ್ಕರಿಸಿ ತಡೆದೇ ಬರುವ ಬಹಳಷ್ಟು ಸಂದರ್ಭಗಳು ಈಗಲೂ ಚಾಲ್ತಿಯಲಿದ್ದು, ಕುಟುಂಬದವರಿಂದ ಗೆಳತಿಯರಿಂದ ಮಾತು ಕೇಳಬೇಕಾದ ಪ್ರಸಂಗಗಳು ಈಗಲೂ ನಡೆಯುತ್ತಿವೆ. ಇದಕ್ಕೆ ಕಾರಣ... ಒಂದು ದಿನದ ಸಂಕಟವೋ ಅಥವಾ ಒಂದು ತಿಂಗಳ ಸೊಂಕೋ ಎನ್ನುವುದು ನಿಜವಾಗಿಯೂ 'ಸ್ವಚ್ಛ ಭಾರತ'ದ ಪರಿಕಲ್ಪನೆಯಲ್ಲಿ ಯೋಚಿಸಬೇಕಾದ ವಿಷಯವೇ ಎನಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in

